ಬಾಗಿಲು ಇಡಿ, ಆ ಬಾಗಿಲಲ್ಲಿ ಒಬ್ಬ ಶಸ್ತ್ರಾಸ್ತ್ರ ಸಜ್ಜಿತ ಯೋಧನಿರಲಿ. ಹಾಗಿದ್ದರೆ ಯಾವ ಅಪರಿಚಿತನೂ ಶಾಲೆಯೊಳಗೆ ನುಗ್ಗುವುದಿಲ್ಲ' ಎಂಬ ಮಾತುಗಳನ್ನು ಟಿ.ವಿ. ಕ್ಯಾಮೆರಾ ಎದುರಿಗೆ ಆಡಿಯಾಗಿದೆ.

## ಗನ್ ಹಿಂಸಾಚಾರ ನಿಯಂತ್ರಿಸಬಹುದೇ?

ರಾಜಕೀಯ ಸ್ವಾರ್ಥವನ್ನು ಬದಿಗಿಟ್ಟು ಎಲ್ಲ ಸೆನೆಟರ್‌ಗಳೂ, ಹೌಸ್ ಪ್ರತಿನಿಧಿಗಳೂ ದೇಶದ ಶಸ್ತ್ರಾಸ್ತ್ರ ಕಾಯಿದೆಗಳನ್ನು ಬಿಗಿಗೊಳಿಸಬೇಕಿರುವುದು ಈ ಕ್ಷಣದ ಅಗತ್ಯವಾಗಿದೆ. ಹಾಗೆ ಮಾಡದ ಪಕ್ಷದಲ್ಲಿ ಮುಂಬರುವ ಚುನಾವಣೆಗಳಲ್ಲಿ ಇಂಥ ರಾಜಕಾರಣಿಗಳನ್ನು ಸೋಲಿಸುವ ಧೈರ್ಯವನ್ನು ಪ್ರಜೆಗಳು ಮಾಡಬೇಕು.

ಇಪ್ಪತ್ತೊಂದು ವರ್ಷದ ಒಳಗಿನವರು ಬಂದೂಕು ಖರೀದಿಸದಂತೆ ನಿಷೇಧ ಹೇರುವುದು, ಹಿನ್ನೆಲೆ ಪರಿಶೀಲನೆಯನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವುದು, ಬಂದೂಕು ಹೊಂದಿದವರು ಗನ್ನುಗಳನ್ನು ಭದ್ರವಾಗಿ ಲಾಕರುಗಳಲ್ಲಿಡಬೇಕು, ಮುಖ್ಯವಾಗಿ ಮಕ್ಕಳ ಕೈಗೆ ಸಿಗದಂತೆ ಗುಪ್ತ ಸ್ಥಳದಲ್ಲಿಡಬೇಕೆಂಬ ನಿಯಮ ಜಾರಿಗೆ ತರುವುದು, ಗನ್ನುಗಳ ಕುರಿತಾಗಿ ವಿಶೇಷ ಎಚ್ಚರಿಕೆಯ ತರಬೇತಿ ನೀಡುವುದು, 'ಸ್ಮಾರ್ಟ್‌ಗನ್'ಗಳನ್ನು ಅಂದರೆ ಮಾಲಿಕನ ಬೆರಳಚ್ಚು ದಾಖಲೆಯಾದರೆ ಮಾತ್ರ ಕಾರ್ಯನಿರ್ವಹಿಸಬಲ್ಲ ಗನ್‌ಗಳನ್ನು ಬಳಕೆಗೆ ತರುವುದು ಮುಂತಾದ ಗನ್ ನೀತಿಗಳನ್ನು ಎರಡು ಬಾರಿ ಪುಲಿಟ್ಜರ್ ಪ್ರಶಸ್ತಿ ವಿಜೇತ ಪತ್ರಕರ್ತ ನಿಕೊಲಸ್ ಕ್ರಿಸ್ಟಾಫ್ ಪ್ರಸ್ತಾಪಿಸಿದ್ದಾರೆ.

ಈ ಬಾರಿ ಶೂಟಿಂಗ್ ನಡೆದ ಟೆಕ್ಸಾಸ್ ರಾಜ್ಯವಂತೂ ವಿರೋಧಾಭಾಸಗಳ ಆಡುಂಬೊಲ. ಈ ರಾಜ್ಯದಲ್ಲಿ ಗರ್ಭಿಣಿಯರು ಆರೇ ವಾರದ ಭ್ರೂಣವನ್ನೂ ಗರ್ಭಪಾತ ಮಾಡಿಸುವಂತಿಲ್ಲ. ಎಷ್ಟೋ ಹೆಣ್ಣುಮಕ್ಕಳಿಗೆ ಗರ್ಭದೊಳಗಿನ ಭ್ರೂಣಕ್ಕೆ ಎಂಟು–ಒಂಬತ್ತು ವಾರಗಳಾಗುವ ತನಕ ತಾವು ಗರ್ಭವತಿಯಾಗಿರುವುದೇ ಗೊತ್ತಾಗಿರುವುದಿಲ್ಲ. ಹೀಗಿರುವಾಗ ಅಲ್ಟ್ರಾಸೌಂಡ್ ಪರೀಕ್ಷೆಯಲ್ಲಿ ಭ್ರೂಣದ ಹೃದಯ ಬಡಿತ ಗೊತ್ತಾದರೆ ಸಾಕು, ಅದನ್ನು ಮಗುವೆಂದೇ ತಿಳಿಯಬೇಕು, ಅದನ್ನು ನಾಶಪಡಿಸುವ ಹಕ್ಕು ಸ್ವತಃ ತಾಯಿಗೂ ಇರುವುದಿಲ್ಲ ಎಂಬ ವಿಚಿತ್ರ ಕಾನೂನು ಈ ರಾಜ್ಯದಲ್ಲಿ ಜಾರಿಯಲ್ಲಿದೆ. ತಾವು ಜೀವಪರ (ಪ್ರೋ–ಲೈಫ್) ಎಂದು ಇಲ್ಲಿನ ರಾಜಕಾರಣಿಗಳೂ, ಬಹುಪಾಲು ಮತದಾರರೂ ಒಕ್ಕೊರಲಿನಿಂದ ಈ ಕಾಯಿದೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ತಾವು ಗರ್ಭವತಿಯಾದ ಹೆಣ್ಣಿನ ಆಯ್ಕೆಯ ಪರ (ಪ್ರೋ–ಚಾಯ್ಸ್) ಎನ್ನುವ ಪ್ರತಿಭಟನಾಕಾರರನ್ನು ಕಂಡರೆ ಮೂಗು ಮುರಿಯುತ್ತಾರೆ.

ಇದೇ ಟೆಕ್ಸಾಸ್ ರಾಜ್ಯದಲ್ಲಿ ಗನ್ ಮಾಲಿಕರು ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಲ್ಲಿ ಗನ್ ನಿಷೇಧವನ್ನು ಸ್ಪಷ್ಟವಾಗಿ ತಿಳಿಸಿಲ್ಲವೋ ಅಲ್ಲೆಲ್ಲ ರಾಜಾರೋಷವಾಗಿ ಹ್ಯಾಂಡ್–ಗನ್ ಕೊಂಡೊಯ್ಯಬಹುದು ಎಂಬ ನೀತಿಯೂ






ಕರೆದರೆ ಓಗುಡುವ, ಕಚಗುಳಿಯಿಟ್ಟರೆ ನಗುವ ಪುಟಾಣಿಗಳು ಬಿಳಿ ಹಲಗೆಯ ಮೇಲಿನ ಅಕ್ಷರಗಳಾಗುವ ದುರಂತಕ್ಕೆ ಹೊಣೆ ಯಾರು?